ಯೋಜನೆ ಪುನಶ್ಚೇತನ ಯೋಜನೆಯಡಿ ಪ್ರಸ್ತುತ ವ್ಯವಸ್ಥೆಯನ್ನು ಉತ್ತಮಪಡಿಸಲಾಗುವುದು. ತಾತ್ಕಾಲಿಕವಾಗಿ ಚಿಂಚಖಂಡಿ ಗ್ರಾಮದ ಬಳಿ ಕೊಳವೆಬಾವಿ ಕೊರೆದು ಸುಮಾರು 6 ಕಿ.ಮೀ. ಕೊಳವೆಗಳನ್ನು ಹಾಕಿ ಕುಡಿಯುವ ನೀರು ಪೂರೈಸಲಾಗುತ್ತದೆ.

ಇ) 1996-97ನೇ ಸಾಲಿನಲ್ಲಿ ಮಂಜೂರಾದ ಕಿರುನೀರು ಪೂರೈಕೆ ಪುನಃಶ್ಚೇತನ ಯೋಜನೆಯನ್ನು ಮಾರ್ಚ್ 1997ರೊಳಗಾಗಿ ಪೂರ್ಣಗೊಳಿಸಲಾಗುವುದು. ನೆದರ್‌ಲ್ಯಾಂಡ್ ಯೋಜನೆಯಡಿ ಜೀರಗಾಳ್ ಗ್ರಾಮದ ಕುಡಿಯುವ ನೀರಿನ ಕಾಮಗಾರಿಯನ್ನು ಡಿಸೆಂಬರ್ 96ರೊಳಗಾಗಿ ಪ್ರಾರಂಭಿಸಿ, ಮಾರ್ಚ್ 98ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ವಿಷಯ:- ದಶಲಕ್ಷ ಬಾವಿ ಯೋಜನೆ

1316 (2328) **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳಿ ಗ್ರಾಮೀಣ):-** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ದಶಲಕ್ಷ ಬಾವಿ ಯೋಜನೆ ಜಾರಿಯಲ್ಲಿದೆಯೇ, 1996-97ನೇ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣ ನಿಗದಿಪಡಿಸಲಾಗಿದೆ? ಈ ಯೋಜನೆಯ ಗುರಿ ಹಾಗೂ ಪ್ರಗತಿ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-

ಅ) ರಾಜ್ಯದಲ್ಲಿ ದಶಲಕ್ಷ ಬಾವಿ ಯೋಜನೆ ಜಾರಿಯಲ್ಲಿದೆ. ರಾಜ್ಯದಲ್ಲಿ ಈ ಯೋಜನೆಯಡಿ ತಾತ್ಕಾಲಿಕವಾಗಿ ರೂ. 2915.54 ಲಕ್ಷ ಹಣ ನಿಗದಿಪಡಿಸಲಾಗಿದೆ. ಈ ಯೋಜನೆಯ ತಾತ್ಕಾಲಿಕ 96-97ನೇ ವಾರ್ಷಿಕ ಗುರಿ ರೂ. 2915.54 ಲಕ್ಷಗಳಲ್ಲಿ ಜಿಲ್ಲಾ ಪಂಚಾಯತ್‌ಗಳು ಜೂನ್ 96ರ ಅಂತ್ಯದವರೆಗೆ ರೂ. 245.639 ಲಕ್ಷಗಳಷ್ಟು ಖರ್ಚು ಮಾಡಲಾಗಿದೆ.

ವಿಷಯ:- ನೆಮ್ಮದಿ ಯೋಜನೆಗೆ ಒದಗಿಸಿರುವ ಹಣ.

1317 (2330) **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳಿ ಗ್ರಾಮೀಣ):-** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 'ನೆಮ್ಮದಿ' ಯೋಜನೆಯ ಮುಖ್ಯಾಂಶಗಳೇನು ಹಾಗೂ ಗುರಿಗಳೇನು?

ಆ) ರಾಜ್ಯದಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ, ಈ ಯೋಜನೆಗೆ ಎಷ್ಟು ಹಣ ನಿಗದಿಪಡಿಸಲಾಗಿದೆ ಆಗಿರುವ ಸಾಧನೆ ಎಷ್ಟು? (ವಿವರಗಳನ್ನು ಒದಗಿಸುವುದು).

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-

ಅ) ನೆಮ್ಮದಿ ಕಾರ್ಯಕ್ರಮವನ್ನು ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಬಳಪಡಿಸದಿರುವ ರಾಜ್ಯದ 42 ತಾಲ್ಲೂಕುಗಳಲ್ಲಿ ಕೃಷಿ ಕಾಮಗಾರಿಗಳ ಕೆಲಸ ಕಡಿಮೆ ಇರುವ ಕಾಲದಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗವನ್ನು ಒದಗಿಸುವುದೇ ಈ ಯೋಜನೆಯ ಮುಖ್ಯ ಅಂಶ.